RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-IVA | ಬೆಂಗಳೂರು, ಶನಿವಾರ, ಮಾರ್ಚ್ ೩, ೨೦೧೮ (ಫಾಲ್ಗುಣ ೧೨, ಶಕ ವರ್ಷ ೧೯೩೯) | ಸಂ. ೩೪೨ |
|---|---|---|
| Part-IVA | Bengaluru, Saturday, March 3, 2018 (Palguna 12, Shaka Varsha 1939) | No. 342 |


ಸಾರಿಗೆ ಸಚಿವಾಲಯ

ಅಧಿಸೂಚನೆ

**ಸಂ. ಸಾರಿಇ. 66 ಸಾಇಪ 2017, ಬೆಂಗಳೂರು. ದಿನಾಂಕ: 03-03-2018**

ಮೋಟಾರು ವಾಹನಗಳ ಅಧಿನಿಯಮ 1988 (ಕೇಂದ್ರ ಅಧಿನಿಯಮ ಸಂ. 59/1988)ಕಲಂ 67ರ ಉಪ ಕಲಂ 1 (ಡಿ) (i) ರಡಿ ಸರ್ಕಾರದ ಅಧಿಸೂಚನೆ ಸಂಖ್ಯೆ ಸಾರಿಇ 217 ಸಾಇಪ 2012 ದಿನಾಂಕ 5-12-2012 ಮತ್ತು ಅಧಿಸೂಚನೆ ಸಂಖ್ಯೆ ಸಾರಿಇ 56 ಸಾಇಪ 2013 ದಿನಾಂಕ 03-06-2013 ರಲ್ಲಿ ರಾಜ್ಯದ ನಗರ ಪ್ರದೇಶಗಳಲ್ಲಿ ಹವಾನಿಯಂತ್ರಣ ಮತ್ತು ಹವಾನಿಯಂತ್ರಣ ರಹಿತ ಸಿಟಿ ಟ್ಯಾಕ್ಸಿಗಳಿಗೆ ಕನಿಷ್ಠ ಮತ್ತು ಗರಿಷ್ಠ ದರಗಳನ್ನು ಮತ್ತು ಸಾಗಾಣಿಕೆ ದರಗಳನ್ನು ನಿಗದಿಪಡಿಸಿ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿತ್ತು.

ಇಂಧನ ಬೆಲೆಗಳು ಕಾಲಕಾಲಕ್ಕೆ ಹೆಚ್ಚಾಗುತ್ತಿರುವುದರಿಂದ ವಾಹನಗಳ ಬೆಲೆ ಮತ್ತು ನಿರ್ವಹಣಾ ವೆಚ್ಚಗಳು ಗಣನೀಯವಾಗಿ ಹೆಚ್ಚಾಗಿರುವುದರಿಂದ ಅಲ್ಲದೆ, ವಿವಿಧ ಮಾದರಿಯ ಟ್ಯಾಕ್ಸಿಗಳು, ಸಿಟಿ ಟ್ಯಾಕ್ಸಿಗಳು (ಮೋಟಾರು ಕ್ಯಾಬ್) ಮತ್ತು ಅಗ್ರಿಗೇಟರ್ ಲೈಸೆನ್ಸ್ ಹೊಂದಿ ಸಂಚರಿಸುತ್ತಿರುವ ಟ್ಯಾಕ್ಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಚರಣೆಯಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಮತ್ತು ವಾಹನಗಳ ಬಾಳಿಕೆ, ವಾಹನಗಳ ಸವಕಳಿ, ಚಾಲಕರ ಸಂಬಳ, ರಸ್ತೆ ತೆರಿಗೆ, ಪರ್ಮಿಟ್ ಶುಲ್ಕ, ವಿಮೆ, ವಾಹನಗಳ ಬಿಡಿಭಾಗಗಳು, ಇಂಧನ ದರಗಳಲ್ಲಿ ಹೆಚ್ಚಳ, ಬ್ಯಾಂಕ್‌ಗಳ ಬಡ್ಡಿದರ ಮತ್ತು ವಾಹನಗಳ ಸೇವೆ ನಿರ್ವಹಣೆ, ಮಾರುಕಟ್ಟೆ ದರಗಳು ಹಾಗೂ ಕೇಂದ್ರ ಸರ್ಕಾರ ಕಾಲಕಾಲಕ್ಕೆ ನೀಡುವ ಮಾರ್ಗ ಸೂಚಿಗಳನ್ನು ಗಮನದಲ್ಲಿಟ್ಟುಕೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಾತ್ರ ಚಲಾವಣೆಯಲ್ಲಿರುವ ಟ್ಯಾಕ್ಸಿಗಳು, ಸಿಟಿ ಟ್ಯಾಕ್ಸಿಗಳು ಹಾಗೂ ಅಗ್ರಿಗೇಟರ್ಸ್ ನಿಯಮದ ಅಡಿಯಲ್ಲಿ ಕಾರ್ಯಾಚರಣೆಗೊಳ್ಳುವ ಟ್ಯಾಕ್ಸಿಗಳು ಹಾಗೂ ಇನ್ನಿತರೇ ಟ್ಯಾಕ್ಸಿಗಳನ್ನು ಒಳಗೊಂಡಂತೆ ವಿವಿಧ ಮಾದರಿಯ ಟ್ಯಾಕ್ಸಿಗಳಿಗೆ ವಾಹನಗಳ ಪ್ರಯಾಣ ದರಗಳನ್ನು ಪರಿಷ್ಕರಿಸುವಂತೆ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಬೆಂಗಳೂರು ರವರುಗಳಿಗೆ ನಿರ್ದೇಶನ ನೀಡುವುದು ಅಗತ್ಯವೆಂದು ಕರ್ನಾಟಕ ಸರ್ಕಾರವು ಪರಿಗಣಿಸಿ ಮೋಟಾರು ವಾಹನಗಳ ಅಧಿನಿಯಮ 1988ರ (ಕೇಂದ್ರ ಅಧಿನಿಯಮ 59/1988) ಕಲಂ 67ರ ಉಪ ಕಲಂ 1 (ಡಿ) (i) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲೆ ತಿಳಿಸಲಾದ ಅಧಿಸೂಚನೆಗಳನ್ನು ಭಾಗಶಃ ಮಾರ್ಪಡಿಸಿ, ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಬೆಂಗಳೂರಿನ ನಗರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

ನಿರ್ದೇಶನಗಳು

ಪ್ರಯಾಣಿಕರ ದರಗಳನ್ನು ನಿರ್ಧರಿಸುವಾಗ ವಾಹನಗಳ ಬೆಲೆಯನ್ನು ಆಧರಿಸಿ ವಾಹನಗಳನ್ನು ಎ.ಬಿ.ಸಿ ಮತ್ತು ಡಿ ಮಾದರಿಗಳನ್ನಾಗಿ ವರ್ಗೀಕರಿಸಲಾಗಿದೆ. ಎ ವರ್ಗವು ಹೆಚ್ಚಿನ ಬೆಲೆಯುಳ್ಳ ವಾಹನಗಳಾಗಿದ್ದು, ಡಿ ವರ್ಗವು ಕಡಿಮೆ ಬೆಲೆಯ ವಾಹನವಾಗಿ ಸೇವೆ ಒದಗಿಸುವ ವಾಹನಗಳಾಗಿದ್ದು, ಮೌಲ್ಯದ ಆಧಾರದಲ್ಲಿ ವರ್ಗೀಕರಿಸಲಾಗಿದೆ.

ಬೆಂಗಳೂರು ನಗರ ಬಿ.ಬಿ.ಎಂ.ಪಿ ಪರಿಧಿಯಲ್ಲಿ ಆಚರಣೆಯಲ್ಲಿರುವ ಟ್ಯಾಕ್ಸಿಗಳು, ಸಿಟಿ ಟ್ಯಾಕ್ಸಿಗಳು ಹಾಗೂ ಅಗ್ರಿಗೇಟರ್ಸ್ ನಿಯಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಟ್ಯಾಕ್ಸಿಗಳು ಹಾಗೂ ಇನ್ನಿತರೆ ಟ್ಯಾಕ್ಸಿಗಳನ್ನು ಬೆಂಗಳೂರು ನಗರ ವ್ಯಾಪ್ತಿ ಒಳಗೊಂಡಂತೆ ಬಿ.ಬಿ.ಎಂ.ಪಿ ವ್ಯಾಪ್ತಿಯಿಂದ 25 ಕಿ.ಮೀ. ವರೆಗಿನ ಪರಿಧಿಯಲ್ಲಿ ಆಚರಣೆಮಾಡಲು ಈ ಕೆಳಕಂಡಂತೆ ಬಾಡಿಗೆ ದರಗಳನ್ನು ಕೂಡಲೇ ಜಾರಿಗೆ ಬರುವಂತೆ ನಿಗಧಿಪಡಿಸಲು ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ ಮತ್ತು ಬೆಂಗಳೂರು ನಗರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

| ವಾಹನದ ವರ್ಗ | ವಾಹನದ ಮೌಲ್ಯ | ಕನಿಷ್ಠದರಗಳು 4.ಕಿ.ಮೀ.ಗೆ | ತದನಂತರದ ಪ್ರತಿ ಕಿ.ಮೀ |
|---|---|---|---|
| ಡಿ –ವರ್ಗ | 5 ಲಕ್ಷಗಳ ವರೆಗೆ | 44.00 | ಗರಿಷ್ಠ – 22.00<br>ಕನಿಷ್ಠ – 11.00 |
| ಸಿ –ವರ್ಗ | 5 ಲಕ್ಷದಿಂದ 10 ಲಕ್ಷಗಳ ವರೆಗೆ | 48.00 | ಗರಿಷ್ಠ – 24.00<br>ಕನಿಷ್ಠ – 12.00 |
| ಬಿ –ವರ್ಗ | 10 ಲಕ್ಷದಿಂದ 16 ಲಕ್ಷಗಳ ವರೆಗೆ | 64.00 | ಗರಿಷ್ಠ – 34.00<br>ಕನಿಷ್ಠ – 16.00 |
| ಎ –ವರ್ಗ | 16 ಲಕ್ಷ ಮೇಲ್ಪಟ್ಟು | 80.00 | ಗರಿಷ್ಠ – 45.00<br>ಕನಿಷ್ಠ – 20.00 |

1. ಪ್ರವರ್ತಕರು/ಅಗ್ರಿಗೇಟರ್ಸ್ ಪಾವತಿಸಬೇಕಾಗಿರುವ ಜಿ.ಎಸ್.ಟಿ ಮತ್ತು ಟೋಲ್ ಶುಲ್ಕವನ್ನು ಪ್ರಯಾಣಿಕರಿಂದ ವಸೂಲಿ ಮಾಡಬಹುದಾಗಿದೆ.
2. ಸಮಯದ ಆಧಾರದಲ್ಲಿ ದರಗಳನ್ನು ವಸೂಲಿ ಮಾಡಬಾರದು. ಸರ್ಕಾರದಿಂದ ಕಿ.ಮೀ ಆಧಾರದಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ದರಗಳನ್ನು ಮಾತ್ರ ಪ್ರಯಾಣಿಕರಿಂದ ವಸೂಲಿ ಮಾಡುವುದು.
3. ಕಾಯುವಿಕೆ ದರಗಳು: ಮೊದಲಿನ 20/– ನಿಮಿಷಗಳ ವರೆಗೆ ಉಚಿತ, ನಂತರದ ಪ್ರತಿ 15 ನಿಮಿಷಗಳಿಗೆ ಅದರ ಭಾಗಕ್ಕೆ ರೂ 10/–.
4. ಸರ್ಕಾರದಿಂದ ಕಿ.ಮೀ ಆಧಾರದಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ದರಗಳನ್ನು ಹೊರತುಪಡಿಸಿ ಅನಧಿಕೃತವಾಗಿ ಯಾವುದೇ ದರಗಳನ್ನು ಪ್ರಯಾಣಿಕರಿಂದ ಪಡೆಯುವಂತಿಲ್ಲ.

ರಾಜ್ಯದ ಉಳಿದ ನಗರಗಳಲ್ಲಿನ ಸಿಟಿ ಟ್ಯಾಕ್ಸಿಗಳಿಗೆ ಸಂಬಂಧಿಸಿದಂತೆ ಹಿಂದಿನ ಅಧಿಸೂಚನೆ ಸಂಖ್ಯೆ:ಸಾರಿಇ 217.ಸಾಇಪ 2012 ದಿನಾಂಕ 5–12–2012 ಮತ್ತು ಅಧಿಸೂಚನೆ ಸಂಖ್ಯೆ: ಸಾರಿಇ 56.ಸಾಇಪ 2013 ದಿನಾಂಕ 03–06–2013ರಲ್ಲಿ ನಿಗಧಿಪಡಿಸಿರುವ ದರಗಳು ಚಾಲ್ತಿಯಲ್ಲಿರುತ್ತವೆ.

ಅಧಿಸೂಚನೆ ಸಂಖ್ಯೆ:ಸಾರಿಇ 66 ಸಾಇಪ 2017 ದಿನಾಂಕ 09–01–2018 ರ ಆದೇಶವನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಬೀರೇಶ್
ಸರ್ಕಾರದ ಉಪ ಕಾರ್ಯದರ್ಶಿ
ಸಾರಿಗೆ ಇಲಾಖೆ

**TRANSPORT SECRETARIAT**

**NOTIFICATION**

**No. SARIE 66 SAEPA 2017, Bengaluru, Dated: 03-03-2018**

In exercise of powers conferred by sub section 1(d) (i) of Section 67 of Motor Vehicle Act 1988 (No. 59/1988 of Central Act) State Transport Authority and Regional Transport Authorities have been directed to prescribe the minimum and maximum rates of fares and freights for Air conditioned and Non Air conditioned city taxies in the State vide Notification No. SARIE 217 SAEPA 2012 Dated 05-12-2012 an d SARIE 56 SAEPA 2013 dated 03-06-2013.

Whereas, the prices of fuel, cost of the vehicles and maintenance has increased considerably and in view of the operation of different models of cabs operating as taxis in Bangalore City limits also keeping in view of the various factors influencing the operation of the taxies such as cost of the vehicle, depreciation of the vehicle value, salary of the driver, insurance of the vehicles, spare parts, bank interest charges etc., warrants the revision of fares after considering prevailing market rates and periodical guidelines issued by Government of India. In exercise of the powers conferred by sub-section 1(d) (i) of section 67 of Motor Vehicles Act 1988 (Act No. 59 of 1988) of Central Act. the Government hereby issue the following directions to the Karnataka State Transport Authority and the Regional Transport Authorities in Bangalore to revise the fares.

**DIRECTIONS**

The category of the vehicles are classified as A, B, C and D models. The classification A, B, C and D Models are as per the cost of vehicles, class 'A' is the highest cost of vehicle and 'D' is the lowest cost of the vehicle.

The Karnataka State Transport Authority and the Regional Transport Authorities in Bangalore are directed to fix the fares with effect from the date of this notification, the following minimum and maximum fares for taxies, city taxies and taxies operating under Aggregators rules and other taxies operating in the Bangalore city within the radius of 25 KMs from the BBMP city limits.

| Category | Cost of car (INR) | Minimum charges up to 4 Kms | Fare Structure for subsequent Km | |
|---|---|---|---|---|
| Class-D | Up to 5 lakhs | 44.00 | Maximum | 22 |
| | | | Minimum | 11 |
| Class-C | 5-10 lakhs | 48.00 | Maximum | 24 |
| | | | Minimum | 12 |
| Class-B | 10-16 lakhs | 64.00 | Maximum | 34 |
| | | | Minimum | 16 |
| Class-A | 16 lakhs and above | 80.00 | Maximum | 45 |
| | | | Minimum | 20 |

1. The operators/aggregators pays additional charges like GST and toll fee the same may be recovered from the commuters.
2. No fare shall be collected on the basis of time. Only the fares which shall be notified by the Government on the basis of K.M travelling alone shall be levied to the commuters.
3. **Waiting charge** – free for the first 20 minutes and thereafter Rs. 10/- per 15 Minutes or part thereof.
4. No other hidden charges shall be levied other than the fare charges notified by the Government.

The prevailing fares fixed in Notification No. SARIE 217 SAEPA 2012 Dated 05-12-2012 an d SARIE 56 SAEPA 2013 dated 03-06-2013 shall be continued for other cities in the State.

The Notification No SARIE 66 SAEPA 2017 Dated 09-01-2018is hereby withdrawn.

By order and in the name of the Governor of Karnataka

**K.BEERESH**
Deputy Secretary to Government,
Transport Department.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪ7) ಪ್ರತಿಗಳು: 100